# ಹಲವು ದಿಕ್ಕುಗಳ ಗಾಳಿ–ಬೆಳಕು

ಶಿಶುಗೀತೆಗಳ ಕಲಿಕೆ ಮಕ್ಕಳ ಬೆಳವಣಿಗೆಯಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಗೀತೆಗಳು ಎಳೆಯ ಜೀವಗಳ ಭಾವಲೋಕವನ್ನು ವಿಸ್ತರಿಸುವುದಲ್ಲದೇ, ಕಲ್ಪನೆಯ ಬೆಳವಣಿಗೆಗೆ ಸಾಕಷ್ಟು ಸಹಾಯ ಮಾಡುತ್ತವೆ. ಮಗು ಅರಳಿ ಬೆಳೆಯಲು ಶಿಶುಸಾಹಿತ್ಯದ ಗಾಳಿ, ಬೆಳಕು, ನೀರು ಬೇಕು. ನಮ್ಮ ಅನೇಕ ಹಿರಿಯ ಸಾಹಿತಿಗಳು ಮಕ್ಕಳಿಗಾಗಿ ಉತ್ತಮ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಈಗಲೂ ಕೆಲವು ಸಾಹಿತಿಗಳು ಮಕ್ಕಳಿಗಾಗಿ ಶಿಶುಗೀತೆಗಳನ್ನು ಬರೆಯುತ್ತಿದ್ದಾರೆ. ಈ ಹಿಂದೆ ಪಂಜೆ ಮಂಗೇಶರಾವ್, ಕುವೆಂಪು, ಜಿ.ಪಿ. ರಾಜರತ್ನಂ, ಹೊಯಿಸಳ, ದಿನಕರ ದೇಸಾಯಿ ಅವರು ಬರೆದ ಶಿಶುಗೀತೆಗಳು ಮಕ್ಕಳ ನಾಲಿಗೆಯ ತುದಿಯಲ್ಲಿರುತ್ತಿದ್ದವು. ಮಕ್ಕಳು ಶಿಶುಗೀತೆಗಳನ್ನು ಕೇಳದೆ, ಕಲಿಯದೆ ದೊಡ್ಡವರಾಗುತ್ತಿರುವ ವೇಗದ, ಮಾಹಿತಿಯೇ ಮುಖ್ಯವಾಗಿರುವ ಕಾಲ ಇದು. ಬದಲಾದ ಕಾಲದಲ್ಲಿ ಉತ್ತಮ ಶಿಶುಗೀತೆಗಳು ಮಕ್ಕಳ ಮನಸ್ಸನ್ನು ಮುಟ್ಟುತ್ತಿಲ್ಲ. 'ಮಯೂರ' ಈ ನಿಟ್ಟಿನಲ್ಲಿ 'ಹೊಸ ಮಕ್ಕಳಿಗೆ ಹಳೆಯ ಪದ್ಯ'ಗಳನ್ನು ನೆನಪಿಸುತ್ತಿದೆ. ಪ್ರತಿ ಶಿಶುಗೀತೆಗೆ ಕೊಡಲಾದ ಟಿಪ್ಪಣಿ ಕವಿತೆಯ ಸೌಂದರ್ಯವನ್ನು, ಮಹತ್ವವನ್ನು ಈ ಕಾಲದ ಮನಸ್ಸುಗಳಿಗೆ ಪರಿಚಯಿಸುತ್ತದೆ. ಇದು, ನವೆಂಬರ್ ಸಂಚಿಕೆಯ ವಿಶೇಷವಾಗಿದೆ.



ಕೃಷ್ಣ ಎಸ್. ಹೂಗಾರ

ಈ ಸಂಚಿಕೆಯಿಂದ ಕತೆಗಾರ ಕರ್ಕಿ ಕೃಷ್ಣಮೂರ್ತಿ ಅವರ ಅಂಕಣ 'ಇಮೋಜಿ ಭಾಷೆ' ಶುರುವಾಗುತ್ತಿದೆ. ಕನ್ನಡದ ಹೊಸ ತಲೆಮಾರಿನ ಲೇಖಕ ಕೃಷ್ಣಮೂರ್ತಿ ಕತೆಯ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಅವರ ಕತೆಗಳು ಕನ್ನಡ ಓದುಗರ, ವಿಮರ್ಶಕರ ಮೆಚ್ಚುಗೆಯನ್ನು, ಗಮನವನ್ನು ಸೆಳೆದಿವೆ. ಸಾಂಸ್ಕೃತಿಕ ವಿದ್ಯಮಾನಗಳ ಕುರಿತಂತೆ ಅವರು ತಮ್ಮ ಅಂಕಣಗಳಲ್ಲಿ ಬರೆಯಲಿದ್ದಾರೆ.

'ನನಗೆ ಭಾಷೆಯ ಶುದ್ಧತೆ ಬಹಳ ಇಷ್ಟ. ನನ್ನ ವಿದ್ಯಾರ್ಥಿಗಳಿಗೆ, ನನ್ನ ಮಾತನ್ನು ಕೇಳುವವರಿಗೆ ಯಾವಾಗಲೂ ಹೇಳುತ್ತಿರುತ್ತೇನೆ – ಪಾರಿಭಾಷಿಕಗಳನ್ನು, ವೈಜ್ಞಾನಿಕ ಭಾಷೆಯನ್ನು ಬಳಸಬೇಡಿ. ಅವು ಇಂದಲ್ಲ ನಾಳೆ ಸವಕಲಾಗುತ್ತವೆ. ಪ್ರತಿ ವೃತ್ತಿಯವರು ಎಲ್ಲ ಕಾಲದಲ್ಲೂ ತಮ್ಮ ಶಬ್ದಕೋಶವನ್ನು ಬದಲಿಸುತ್ತಲೇ ಇರುತ್ತಾರೆ. ಆದರೆ, ಪ್ರತಿ ಭಾಷೆಯಲ್ಲೂ ಮೂಲಭೂತವಾದ ಪರಿಶುದ್ಧ ಮನುಷ್ಯ ಭಾಷೆಯೊಂದು ಇದ್ದೇ ಇರುತ್ತದೆ. ಅದೇ ಕವಿ ಹಾಗೂ ಲೇಖಕರ ಭಾಷೆ. ಆರು ವರ್ಷದ ಮಗುವಿಗೆ ಕೂಡ ಅರ್ಥವಾಗುವಂತೆ ಸರಳವಾಗಿ, ಸ್ಪಷ್ಟವಾಗಿ ಶುದ್ಧ ಭಾಷೆಯಲ್ಲಿ ಮಾತಾಡಬೇಕು. ಅದರಲ್ಲಿ ಅರ್ಥಗಳಿರಬೇಕು, ಧ್ವನಿಯಿರಬೇಕು' ಎಂದು ಹೇಳುವ ಅಮೆರಿಕದ ಕತೆಗಾರ್ತಿ ಕ್ಯಾಥರಿನ್ ಆನ್ ಪೋರ್ಟರ್‌ಳ ಅನುವಾದಿತ ಸಂದರ್ಶನ ಈ ಸಂಚಿಕೆಯಲ್ಲಿದೆ. ಪ್ರತಿಭಾವಂತ ಕತೆಗಾರ್ತಿ ಆನ್ ಪೋರ್ಟರ್‌ಳ ಗ್ರಹಿಕೆಗಳು, ವಿಚಾರಗಳು ಈ ಕಾಲದ ಸಾಹಿತ್ಯದ ವಿದ್ಯಾರ್ಥಿಗಳನ್ನು, ಆಸಕ್ತರನ್ನು ಪ್ರಭಾವಿಸಬಲ್ಲವು.

ಜಗತ್ತಿನ ಹಲವು ದಿಕ್ಕುಗಳ ಗಾಳಿ–ಬೆಳಕಿಗೆ ತೆರೆದುಕೊಂಡಿರುವ 'ಮಯೂರ'ದ ಈ ಸಂಚಿಕೆ ವೈವಿಧ್ಯಮಯ ಬರಹಗಳಿಂದ ಸಮೃದ್ಧವಾಗಿದೆ. ಮುಂದಿನ ದಿನಗಳಲ್ಲಿ ಭಿನ್ನ ರುಚಿಯ ಇನ್ನಷ್ಟು ಬರಹಗಳನ್ನು ಕೊಡುವ ಪ್ರಯತ್ನ ನಮ್ಮದು.

**ಮಯೂರ ಬಳಗ**